# ಒಂದನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.

CC No.:-303/2013
C.W.:-3
P.W.:-2

ಸಾಕ್ಷಿದಾರರ ಹೆಸರು : ಸಿದ್ದರಾಜು
ತಂದೆಯ ಹೆಸರು ಃ ಸಿದ್ದೇ ಗೌಡ
ವಯಸ್ಸು : 42 ವರ್ಷ
ಉದ್ಯೋಗ : ವ್ಯವಸಾಯ
ಸಾಕೀನ : ಬಾಪೂಜೀ ಕಾಲೋನಿ

ಸಾಕ್ಷಿಗೆ ಈ ದಿನ ದಿಃ 22-01-2020 ರಂದು ಪ್ರಮಾಣ ವಚನ ಬೋಧಿಸಲಾಯಿತು.

ನನಗೆ 1 ರಿಂದ 3 ನೇ ಆರೋಪಿತರು ಗೊತ್ತು. ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿಯು ಗೈರು ಹಾಜರಿದ್ದು , ಆರೋಪಿ ಪರ ವಕೀಲರು ಅವರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ 1 ನನಗೆ ಗೊತ್ತು. ಗಲಾಟೆಯಾದ ನಂತರ ಪೋಲೀಸರು ಬಂದು ಪಂಚನಾಮೆ ಮಾಡಿರುತ್ತಾರೆ. ಪೋಲೀಸರು 6 ವರ್ಷಗಳ ಹಿಂದೆ ಬಂದಿರುತ್ತಾರೆ. ಪೋಲೀಸರು ಪಂಚನಾಮೆಗೆ ಯಾವ ಸಮಯಕ್ಕೆ ಬಂದಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಸದರಿ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಗೆ ನಿ.ಪಿ. 2 ನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿ.ಪಿ. 2 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಸಅ ರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ

ದಿನಾಂಕಃ 14.01.2012 ರಂದು ಚಾಸಾ 1 ರವರು ಮತ್ತು ಆರೋಪಿತರಿಗೂ ಗಲಾಟೆಯಾದ ವಿಚಾರಕ್ಕೆ ಸಂಬಂಧಪಟ್ಟಂತೆ ಪೋಲೀಸರು ಚಾಸಾ 1 ರವರ ಮನೆಯ ಪಕ್ಕ ಬಂದಿದ್ದರು ಎಂದರೆ ಸರಿ . ಆ ಸಮಯದಲ್ಲಿ ಚಾಸಾ 1 ರವರು ಒಂದು ಕಲ್ಲು ಮತ್ತು ದೊಣ್ಣೆಯನ್ನು ಹಾಜರು ಪಡಿಸಿದ್ದು , ಅವುಗಳನ್ನು ಗುನ್ನಾ ಸ್ಥ,ಳದಿಂದ ಪೋಲೀಸರು ತಮ್ಮ ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿ . ಚಾಸಾ 1 ರವರು ಪೋಲೀಸರವರಿಗೆ ಗುನ್ನಾ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ . ನಿ.ಪಿ. 2 ನ್ನು ಸಂಜೆ 5 ಗಂಟೆಯಿಂದ 5.45 ರವರಗೆಗೆ ಬರೆದಿರುತ್ತಾರೆ ಎಂದರೆ ಸರಿ . ಸಾಕ್ಷಿಗೆ ಈ ಗ ಒಂದು ಕಲ್ಲನ್ನು ತೋರಿಸಿದ್ದು , ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮ. 2 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಒಂದು ದೊಣ್ಣೆಯನ್ನು ತೋರಿಸಿದ್ದು , ಅದನ್ನು ನೋಡಿ ಗುರುತಿಸರುತ್ತಾರೆ . ಅದನ್ನು ಮು.ಮ. 1 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಚಾಸಾ 1 ಮತ್ತು 1 ನೇ ಆರೋಪಿಯ ಮನೆಗಳ ಅಕ್ಕಪಕ್ಕ ನನ್ನ ಮನೆ ಇಲ್ಲ. ನಾನು ಆ ಸಂದರ್ಭ ದಲ್ಲಿ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದೆ. ನನಗೆ ಆರೋಪಿತರು ಮತ್ತು ಚಾಸಾ 1 ರವರ ನಡುವೆ ಆದ ಗಲಾಟೆಯ ಬಗ್ಗೆ ನಂತರ ತಿಳಿದಿರುತ್ತದೆ. ನನಗೆ ಪೋಲೀಸರು ದೂರವಾಣಿ ಮಾಡಿ ನಿ.ಪಿ. 2 ಕ್ಕೆ ಪಂಚನಾಗಿ ಬರುವಂತೆ ಕರೆದಿರುತ್ತಾರೆ. ಸಂಜೆ 5.00 ಗಂಟೆ ಸುಮಾರಿಗೆ ದೂರವಾಣಿ ಮಾಡಿರುತ್ತಾರೆ. ಅಲ್ಲಿಗೆ ಹೋದಾಗ ಪೋಲೀಸರು ಮತ್ತು ನಾನು ಮಾತ್ರ ಇದ್ದೇವು. ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಪೋಲೀಸರು ಸ್ಥಳದಿಂದ ಮು.ಮ. 1 ಮತ್ತು 2 ನ್ನು ತೆಗೆದುಕೊಂಡು ಹೋಗಿರುತ್ತಾರೆ. ಮು.ಮ. 1 ಮತ್ತು 2 ರಂತಹ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ . ಮು.ಮ. 1 ಮತ್ತು 2 ನ್ನು ಗುರುತಿಸಲು ನಾನು ಯಾವುದೇ ವಿಶೇಷ ಗುರುತನ್ನು ಇಟ್ಟುಕೊಂಡಿಲ್ಲ. ನನಗೆ ಪಂಚನಾಮೆ ಮಾಡಿದ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ನಿ.ಪಿ. 2 ಕ್ಕೆ ನನ್ನನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ. 2 ಬಿಯನ್ನು ನಾನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಲಯ,
ಕನಕಪುರ